C.N=6953

**ಕರ್ನಾಟಕ ಸರ್ಕಾರ**

ಸಂಖ್ಯೆ: ಆಇ 02 ಟಿಎಫ್‌ಸಿ 2018

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:19.07.2018

**ಸುತ್ತೋಲೆ**

ವಿಷಯ:- ರಾಜಸ್ವ ಮತ್ತು ವೆಚ್ಚದ ಇಲಾಖಾ ಲೆಕ್ಕಗಳನ್ನು ಸಮನ್ವಯೀಕರಿಸುವ ಕುರಿತು.

ಉಲ್ಲೇಖ:- ಸರ್ಕಾರದ ಆದೇಶ ಸಂ:ಎಫ್‌ಡಿ 02 ಟಿಎಫ್‌ಸಿ 2004, ದಿ:09.09.2004.

JD(Plan)/AO
HRMS/DVP(L)/Budget

*********

ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ-346 ರಂತೆ ಸಾರ್ವಜನಿಕ ಸೇವೆಗಳಲ್ಲಿನ ವೆಚ್ಚದ ಪ್ರಗತಿಯನ್ನು ಗಮನಿಸುವುದು ಹಾಗೂ ವೆಚ್ಚವನ್ನು ಅನುದಾನ ನಿಯಂತ್ರಣ ಮಾಡುವ ಹೊಣೆಗಾರಿಕೆ ಆಯಾ ಸಕ್ಷಮ ಪ್ರಾಧಿಕಾರ ಮತ್ತು ನಿಯಂತ್ರಣಾಧಿಕಾರಿಗಳಾಗಿರುತ್ತದೆ. ಸದರಿ ಹೊಣೆಗಾರಿಕೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಲ್ಲಿ ಪಾಲಿಸಬೇಕಾದ ವಿವರವಾದ ವಿಧಾನವನ್ನು ಆರ್ಥಿಕ ಸಂಹಿತೆಯಲ್ಲಿ ನಿಗಧಿಗೊಳಿಸಲಾಗಿದೆ. ಇದೇ ರೀತಿ ಅನುಚ್ಛೇದ 34(2)ರಲ್ಲಿ ಇಲಾಖಾ ರಾಜಸ್ವ ಜಮೆಗಳ ಅಂಕಿ ಅಂಶಗಳನ್ನು ಮಹಾಲೇಖಪಾಲರ ಲೆಕ್ಕಗಳಿಗೆ ಆಧಾರವಾಗಿರುವ ಖಜಾನೆಗಳಲ್ಲಿನ ಜಮೆಗಳೊಂದಿಗೆ ಸಮನ್ವಯೀಕರಿಸುವ ಕುರಿತು ನಿಗದಿಗೊಳಿಸಲಾಗಿದೆ.

2. ವೆಚ್ಚದ ಮೇಲಿನ ಪರಿಣಾಮಕಾರಿ ಆಯವ್ಯಯ ನಿಯಂತ್ರಣವನ್ನು ಸಾಧಿಸಲು ಮತ್ತು ಲೆಕ್ಕ ಪತ್ರಗಳಲ್ಲಿ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಬಟವಾಡೆ ಅಧಿಕಾರಿಗಳು ತಮ್ಮ ಪುಸ್ತಕಗಳಲ್ಲಿನ ವೆಚ್ಚ ಮತ್ತು ಸ್ವೀಕೃತಿಗಳ ಲೆಕ್ಕಗಳನ್ನು ಮಹಾಲೇಖಪಾಲರು (ಲೆ. ಮತ್ತು ಹ) ಅವರು ಲೆಕ್ಕ ಮಾಡಿರುವ ಲೆಕ್ಕಗಳೊಂದಿಗೆ ಪ್ರತಿ ತಿಂಗಳು ಹೊಂದಾಣಿಕೆ ಮಾಡಬೇಕಾಗಿರುತ್ತದೆ. ಲೆಕ್ಕಗಳು ಹೊಂದಾಣಿಕೆಯಾಗದಿರುವುದು ಲೆಕ್ಕಗಳಲ್ಲಿ ಬಿಂಬಿಸಲಾದ ಸ್ವೀಕೃತಿ ಮತ್ತು ವೆಚ್ಚಗಳ ಅಂಕಿಗಳ ಪರಿಪೂರ್ಣತೆ ಮತ್ತು ನಿಖರತೆ ಮೇಲಿನ ಭರವಸೆಯ ಮೇಲೆ ಪರಿಣಾಮ ಬೀರುತ್ತದೆ. ಇಲಾಖೆಗಳಿಂದ ವೆಚ್ಚ ಲೆಕ್ಕಗಳ ಹೊಂದಾಣಿಕೆಯಾಗದಿದ್ದಲ್ಲಿ ವಂಚನೆ, ಹಣದುರುಪಯೋಗ ಮತ್ತು ಮಿತಿಯನ್ನು ಮೀರಿ ಹಣ ಸೆಳೆದ ಪ್ರಸಂಗಗಳು ಪತ್ತೆಯಾಗದೆ ಉಳಿಯುವ ಸಂಭವವಿರುತ್ತದೆ. ಈ ಬಗ್ಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯಲ್ಲಿಯು ಸಹ ವ್ಯಕ್ತವಾಗಿರುತ್ತದೆ. ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಸಹಾ ತನ್ನ ವರದಿಯಲ್ಲಿ ಸ್ವೀಕೃತಿ ಮತ್ತು ವೆಚ್ಚಗಳ ಹೊಂದಾಣಿಕೆ ಮಾಡುವುದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ನಿರ್ದೇಶನ ನೀಡಿರುತ್ತದೆ.

3. ಖಜಾನೆಗಳ ಗಣಕೀಕರಣದಿಂದಾಗಿ ಹಾಗೂ ಖಜಾನೆಗಳು ಮಹಾಲೇಖಪಾಲರಿಗೆ ಕ್ರೋಢೀಕೃತ ಲೆಕ್ಕಗಳನ್ನು ಸಲ್ಲಿಸುವ ಹಿನ್ನೆಲೆಯಲ್ಲಿ ಸಮನ್ವಯೀಕರಣಗೊಳಿಸುವ ಪರಿಷ್ಕೃತ ವಿಧಾನವನ್ನು ಈಗಾಗಲೇ ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ನೀಡಲಾಗಿದೆ.

4. ಪ್ರಸ್ತುತ ಅನುಕಲಿತ ಆರ್ಥಿಕ ನಿರ್ವಹಣಾ ವ್ಯವಸ್ಥೆ, ಖಜಾನೆ-2 ಅನುಷ್ಠಾನದ ಹಿನ್ನೆಲೆಯಲ್ಲಿ ಸಮನ್ವಯೀಕರಣದ ನಮೂನೆ ಹಾಗೂ ವರದಿಗಳನ್ನು ಸಿದ್ಧಪಡಿಸುವ ಪರಿಷ್ಕೃತ ವಿಧಾನವನ್ನು ಅನುಬಂಧದಲ್ಲಿ ನೀಡಲಾಗಿದೆ. ಖಜಾನೆ-2 ಅನುಷ್ಠಾನಗೊಂಡಿರುವ ಇಲಾಖೆಗಳು ಲೆಕ್ಕ ಸಮನ್ವಯೀಕರಣಕ್ಕಾಗಿ ಸದರಿ ವಿಧಾನವನ್ನು ಅನುಸರಿಸಲು ಸೂಚಿಸಲಾಗಿದೆ. ಖಜಾನೆ-2 ಅನುಷ್ಠಾನಗೊಳ್ಳದೆ ಇರುವ ಇತರೆ ಇಲಾಖೆಗಳು ತಮ್ಮ ಇಲಾಖೆಯಲ್ಲಿ ಖಜಾನೆ-2 ಅನುಷ್ಠಾನಗೊಳ್ಳುವವರೆಗೆ ಉಲ್ಲೇಖಿತ ಸರ್ಕಾರದ ಆದೇಶದಲ್ಲಿ

F-834
30/7/18

ನಿಗದಿಪಡಿಸಿರುವ ಪ್ರಸ್ತುತ ವಿಧಾನವನ್ನು ಮುಂದುವರೆಸತಕ್ಕದ್ದು, ಖಜಾನೆ-2 ಅನುಷ್ಠಾನಗೊಂಡ ನಂತರ ಸದರಿ ಇಲಾಖೆಗಳು ಸಹ ಪರಿಷ್ಕೃತ ವಿಧಾನವನ್ನು ಅನುಸರಿಸತಕ್ಕದ್ದು.

5. ಸರ್ಕಾರದ ಆದೇಶ ಸಂ:ಎಫ್‌ಡಿ 02 ಟಿಎಫ್‌ಸಿ 2004, ದಿನಾಂಕ:09.09.2004ರ ಆದೇಶದಲ್ಲಿ ತಿಳಿಸಿರುವಂತೆ ಹಣ ಸೆಳೆಯುವ ಅಧಿಕಾರಿಗಳು (ಡಿಡಿಓ), ನಿಯಂತ್ರಣಾಧಿಕಾರಿಗಳು (ಸಿಓ) ಹಾಗೂ ಮುಖ್ಯ ನಿಯಂತ್ರಣಾಧಿಕಾರಿಗಳು (ಸಿಸಿಓ) ರವರು ಲೆಕ್ಕ ಸಮನ್ವಯೀಕರಣಕ್ಕೆ ನಿಗದಿಗೊಳಿಸಿರುವ ನಮೂನೆ 62(ಬಿ) (Register showing expenditure by Heads of Account), ನಮೂನೆ 62(ಸಿ) (Broadsheet for watching receipt of account from disbursing officers), ನಮೂನೆ 62(ಡಿ) (Compilation sheet), ನಮೂನೆ 62(ಇ) consolidated account ಗಳನ್ನು ನಿರ್ವಹಿಸುವ ಕಾರ್ಯ ವಿಧಾನವನ್ನು ಮುಂದುವರೆಸಲಾಗಿದೆ ಮತ್ತು ರಾಜಸ್ವ ಮತ್ತು ವೆಚ್ಚದ ಇಲಾಖಾ ಲೆಕ್ಕಗಳನ್ನು ಮಹಾಲೇಖಪಾಲರ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಕಡ್ಡಾಯವಾಗಿದೆ.

6. ಡಿಡಿಓರವರು ಭರಿಸಿರುವ ವೆಚ್ಚಗಳನ್ನು ಸಮನ್ವಯೀಕರಿಸಲು ಸಹಾಯಕವಾಗುವಂತೆ ಡಿಡಿಓರವರು 62(ಬಿ)ಯನ್ನು ಸಿಸ್ಟಂನಲ್ಲಿ ಸೃಜಿಸಲು ಖಜಾನೆ-2ರಲ್ಲಿ ಅವಕಾಶವಿರುತ್ತದೆ.

7. ತಮಗೆ ಮ್ಯಾಪಿಂಗ್ ಆಗಿರುವ ಡಿಡಿಓಗಳು ಭರಿಸಿರುವ ವೆಚ್ಚಗಳನ್ನು ಸಮನ್ವಯೀಕರಿಸಲು ಸಹಾಯಕವಾಗುವಂತೆ ನಿಯಂತ್ರಣಾಧಿಕಾರಿಗಳು ನಮೂನೆ 62(ಸಿ) & 62(ಡಿ)ಗಳನ್ನು ಸಿಸ್ಟಂನಲ್ಲಿ ಸೃಜಿಸಲು ಖಜಾನೆ-2ರಲ್ಲಿ ಅವಕಾಶವಿರುತ್ತದೆ.

8. ತಮಗೆ ಮ್ಯಾಪಿಂಗ್ ಆಗಿರುವ ಡಿಡಿಓಗಳು ಭರಿಸಿರುವ ವೆಚ್ಚಗಳನ್ನು ಸಮನ್ವಯೀಕರಿಸಲು ಸಹಾಯಕವಾಗುವಂತೆ ಮುಖ್ಯನಿಯಂತ್ರಣಾಧಿಕಾರಿಗಳು ನಮೂನೆ 62(ಇ) ಸಿಸ್ಟಂನಲ್ಲಿ ಸೃಜಿಸಲು ಖಜಾನೆ-2 ರಲ್ಲಿ ಅವಕಾಶವಿರುತ್ತದೆ.

9. ಪರಿಷ್ಕೃತ ವಿಧಾನದಂತೆ ವೆಚ್ಚಗಳ ಸಮನ್ವಯೀಕರಣದ ನಮೂನೆಗಳು/ವರದಿಗಳನ್ನು ಸಿಸ್ಟಂನಲ್ಲಿ ಸೃಜಿಸಿ ಲೆಕ್ಕ ಸಮನ್ವಯೀಕರಣವನ್ನು ನಿಗದಿತವಾಗಿ ನಿರ್ವಹಿಸುವಂತೆ ತಮ್ಮ ಅಧೀನದ ಎಲ್ಲಾ ನಿಯಂತ್ರಣಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲು ಸೂಚಿಸಲಾಗಿದೆ. ಉಳಿದಂತೆ ಉಲ್ಲೇಖಿತ ಸರ್ಕಾರದ ಆದೇಶದ ಸೂಚನೆಗಳು ಮುಂದುವರೆಯುತ್ತವೆ.

(ಅನಿಲ್ ಕುಮಾರ್ ಝಾ)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆ ಮತ್ತು ಸಂ)
ಆರ್ಥಿಕ ಇಲಾಖೆ.

ಇವರಿಗೆ:

1. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಲಾಗಿದೆ.
2. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369, ಬೆಂಗಳೂರು.

3. ಪ್ರಧಾನ ಮಹಾಲೇಖಪಾಲರು, (ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಪ್ರಧಾನ ಮಹಾಲೇಖಪಾಲರು, (ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು /ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
6. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಖಜಾನೆ-2) ಮತ್ತು ಪದನಿಮಿತ್ತ ಖಜಾನೆ ಆಯುಕ್ತರು, ಆರ್ಥಿಕ ಇಲಾಖೆ ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿ ನಗರ ಬೆಂಗಳೂರು-9.
9. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
10. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
11. ಎಲ್ಲಾ ಜಿಲ್ಲಾಧಿಕಾರಿಗಳು.
12. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ.
13. ಆರ್ಥಿಕ ಇಲಾಖೆಯ ಸರ್ಕಾರದ ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು/ಅಧೀನ ಕಾರ್ಯದರ್ಶಿಗಳು/ ಶಾಖಾಧಿಕಾರಿಗಳು.
14. ಎಲ್ಲಾ ಜಿಲ್ಲಾ ಖಜಾನೆಗಳಾಧಿಕಾರಿಗಳು.
15. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪತ್ರಿಗಳು.

## ಅನುಬಂಧ

## ಸರ್ಕಾರದ ಸುತ್ತೋಲೆ ಸಂ:ಆಇ 02 ಟಿಎಫ್‌ಸಿ 2018, ದಿ:19.07.2018.

| ಕ್ರಮ ಸಂ: | ಚಟುವಟಿಕೆ | ನಿರ್ವಹಿಸಬೇಕಾದವರು | ವಿವರಣೆ |
|---|---|---|---|
| 1 | ನಮೂನೆ 62(ಬಿ) ಯನ್ನು ಸೃಜಿಸಿ ಪರಿಶೀಲಿಸಿ ಅಂಗೀಕರಿಸುವುದು | ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿ | ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿ ವಿವರಗಳನ್ನು ಪರಿಶೀಲಿಸಿ ಸರಿಯಿದ್ದಲ್ಲಿ ಅದನ್ನು ಅಂಗೀಕರಿಸಿ ಮುಖ್ಯ ಲೆಕ್ಕಿಗರಿಗೆ ಅನುಮೋದನೆಗಾಗಿ ಕಳುಹಿಸಬೇಕು. |
| 2 | ಅಂಗೀಕೃತ 62(ಬಿ)ಯನ್ನು ಸ್ವೀಕರಿಸುವುದು | ಮುಖ್ಯ ಲೆಕ್ಕಿಗರು (ಖಜಾನೆ) | ಮುಖ್ಯಲೆಕ್ಕಿಗರು ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿರವರಿಂದ ಅಂಗೀಕೃತವಾದ 62(ಬಿ)ಯನ್ನು ಸ್ವೀಕರಿಸಿ ಅನುಮೋದಿಸಬೇಕು |
| 3 | 62(ಬಿ)ನಲ್ಲಿ ವ್ಯತ್ಯಾಸಗಳಿದ್ದಲ್ಲಿ ಅದನ್ನು ತಿರಸ್ಕರಿಸಿ ತಿದ್ದುಪಡಿ ಕೋರಿಕೆಯನ್ನು ಕೋರಬೇಕು | ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿ | 1) 62(ಬಿ)ನಲ್ಲಿ ವ್ಯತ್ಯಾಸಗಳಿದ್ದಲ್ಲಿ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿ ರವರು ತಿರಸ್ಕರಿಸಬೇಕು.<br>2) ವ್ಯತ್ಯಾಸಗಳನ್ನು ಸರಿಪಡಿಸುವಂತೆ ಕೋರಿಕೆಯನ್ನು ಮುಖ್ಯಲೆಕ್ಕಿಗರಿಗೆ ಕಳುಹಿಸಬೇಕು. |
| 4 | ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿ ಸ್ವೀಕೃತ ತಿದ್ದುಪಡಿ ಕೋರಿಕೆಯನ್ನು ಸಂಸ್ಕರಿಸುವುದು: | ಮುಖ್ಯ ಲೆಕ್ಕಿಗರು | ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿರವರ ಕೋರಿಕೆಯಂತೆ ಮುಖ್ಯ ಲೆಕ್ಕಿಗರು ತಿದ್ದುಪಡಿಯನ್ನು ಸಂಸ್ಕರಿಸುವುದು. |
| 5 | ನಮೂನೆ 62(ಸಿ) ಯನ್ನು ಸೃಜಿಸಿ ಪರಿಶೀಲಿಸಿ ಅಂಗೀಕರಿಸುವುದು. | ನಿಯಂತ್ರಣಾಧಿಕಾರಿಗಳು | ನಿಯಂತ್ರಣಾಧಿಕಾರಿಗಳು 62(ಸಿ) ನಲ್ಲಿನ ವಿವರಗಳನ್ನು ಪರಿಶೀಲಿಸಿ ಸರಿಯಿದ್ದಲ್ಲಿ ಅದನ್ನು ಅಂಗೀಕರಿಸಬೇಕು. |
| 6 | 62(ಸಿ)ನಲ್ಲಿ ವ್ಯತ್ಯಾಸಗಳಿದ್ದಲ್ಲಿ ಅದನ್ನು ತಿರಸ್ಕರಿಸಿ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿರವರಿಗೆ ತಪ್ಪುಗಳ ಬಗ್ಗೆ ತಿಳಿಸಬೇಕು. | ನಿಯಂತ್ರಣಾಧಿಕಾರಿಗಳು | 1) 62(ಸಿ) ನಲ್ಲಿ ವ್ಯತ್ಯಾಸಗಳಿದ್ದಲ್ಲಿ ನಿಯಂತ್ರಣಾಧಿಕಾರಿಗಳು ತಿರಸ್ಕರಿಸಬೇಕು.<br>2) ತಪ್ಪು ವರದಿ (Error Report) ನ್ನು ತಯಾರಿಸಿ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿರವರಿಗೆ ತಿದ್ದುಪಡಿ ಕೋರಲು ತಿಳಿಸಬೇಕು. |
| 7 | ನಮೂನೆ 62(ಡಿ) ನ್ನು ಸೃಜಿಸಿ ಪರಿಶೀಲಿಸಿ ಅಂಗೀಕರಿಸುವುದು. | ನಿಯಂತ್ರಣಾಧಿಕಾರಿಗಳು | ನಿಯಂತ್ರಣಾಧಿಕಾರಿಗಳು 62(ಡಿ) ನಲ್ಲಿನ ವಿವರಗಳನ್ನು ಪರಿಶೀಲಿಸಿ ಸರಿಯಿದ್ದಲ್ಲಿ ಅದನ್ನು ಅಂಗೀಕರಿಸಿ ಮುಖ್ಯ ಲೆಕ್ಕಿಗರಿಗೆ ಅನುಮೋದನೆಗಾಗಿ ಕಳುಹಿಸಬೇಕು. |
| 8 | 62(ಡಿ) ನಲ್ಲಿ ವ್ಯತ್ಯಾಸಗಳಿದ್ದಲ್ಲಿ ಅದನ್ನು ತಿರಸ್ಕರಿಸಿ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿರವರಿಗೆ ತಪ್ಪುಗಳ ಬಗ್ಗೆ ತಿಳಿಸಬೇಕು. | ನಿಯಂತ್ರಣಾಧಿಕಾರಿಗಳು | 1) 62(ಡಿ) ನಲ್ಲಿ ವ್ಯತ್ಯಾಸಗಳಿದ್ದಲ್ಲಿ ನಿಯಂತ್ರಣಾಧಿಕಾರಿಯವರು ತಿರಸ್ಕರಿಸಬೇಕು.<br>2) ತಪ್ಪು ವರದಿ (Error Report) ನ್ನು ತಯಾರಿಸಿ ಹಣ ಸೆಳೆಯುವ ಮತ್ತು |

| | | | |
|---|---|---|---|
| | | | ಬಟವಾಡೆ ಮಾಡುವ ಅಧಿಕಾರಿರವರಿಗೆ ತಿದ್ದುಪಡಿ ಕೋರಲು ತಿಳಿಸಬೇಕು. |
| 9 | ಅಂಗೀಕೃತ 62(ಸಿ) ಮತ್ತು 62(ಡಿ) ಗಳನ್ನು ಸ್ವೀಕರಿಸುವುದು. | ಮುಖ್ಯ ಲೆಕ್ಕಿಗರು | ಮುಖ್ಯ ಲೆಕ್ಕಿಗರು ನಿಯಂತ್ರಣಾಧಿಕಾರಿಯವರಿಂದ ಅಂಗೀಕೃತವಾದ 62(ಸಿ) ಮತ್ತು 62(ಡಿ) ಗಳನ್ನು ಅಂಗೀಕರಿಸಿ ಹೆಟ್ಟಿಂ ನಲ್ಲಿ ಅನುಮೋದಿಸಬೇಕು. |
| 10 | ನಮೂನೆ 62(ಇ) ನ್ನು ಸೃಜಿಸಿ ಪರಿಶೀಲಿಸಿ ಅಂಗೀಕರಿಸುವುದು. | ಮುಖ್ಯನಿಯಂತ್ರಣಾಧಿಕಾರಿಗಳು | ಮುಖ್ಯನಿಯಂತ್ರಣಾಧಿಕಾರಿಗಳು 62(ಇ) ನಲ್ಲಿನ ವಿವರಗಳನ್ನು ಪರಿಶೀಲಿಸಿ ಸರಿಯಿದ್ದಲ್ಲಿ ಅದನ್ನು ಅಂಗೀಕರಿಸಬೇಕು. |
| 11 | 62(ಇ) ನಲ್ಲಿ ವ್ಯತ್ಯಾಸಗಳಿದ್ದಲ್ಲಿ ಅದನ್ನು ತಿರಸ್ಕರಿಸಿ ನಿಯಂತ್ರಣಾಧಿಕಾರಿರವರಿಗೆ ತಪ್ಪುಗಳ ಬಗ್ಗೆ ತಿಳಿಸಬೇಕು. | ಮುಖ್ಯನಿಯಂತ್ರಣಾಧಿಕಾರಿಗಳು | 1) 62 (ಇ) ನಲ್ಲಿ ಮುಖ್ಯನಿಯಂತ್ರಣಾಧಿಕಾರಿರವರು ತಿರಸ್ಕರಿಸಬೇಕು.<br>2) ತಪ್ಪು ವರದಿ (Error Report) ನ್ನು ತಯಾರಿಸಿ ನಿಯಂತ್ರಣಾಧಿಕಾರಿರವರಿಗೆ ವ್ಯತ್ಯಾಸಗಳನ್ನು ಸರಿಪಡಿಸಲು ತಿಳಿಸಬೇಕು. |
| 12 | ತಪ್ಪು ವರದಿಯನ್ನು ಮುಖ್ಯನಿಯಂತ್ರಣಾಧಿಕಾರಿರವರಿಂದ ಪಡೆದು ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗೆ ತಿಳಿಸಬೇಕು. | ನಿಯಂತ್ರಣಾಧಿಕಾರಿಗಳು | 1) ನಿಯಂತ್ರಣಾಧಿಕಾರಿಗಳು ತಮ್ಮ ಕಾರ್ಯಪಟ್ಟಿಯಲ್ಲಿ ಮುಖ್ಯನಿಯಂತ್ರಣಾಧಿಕಾರಿಯವರಿಂದ ತಪ್ಪು ವರದಿಯನ್ನು ಸ್ವೀಕರಿಸಬೇಕು.<br>2) ನಿಯಂತ್ರಣಾಧಿಕಾರಿರವರು ನಂತರ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿರವರಿಗೆ ಪರಿಷ್ಕರಣೆಗಾಗಿ ಗುರುತಿಸಿರುವ ತಪ್ಪುಗಳ ಸಂಬಂಧ ತಿದ್ದುಪಡಿ ಕೋರಲು ತಿಳಿಸಬೇಕು. |
| 13 | ತಪ್ಪು ವರದಿಯನ್ನು ನಿಯಂತ್ರಣಾಧಿಕಾರಿರವರಿಂದ ಪಡೆದು ತಿದ್ದುಪಡಿ ಕೋರಿಕೆಯನ್ನು ಮಂಡಿಸಬೇಕು. | ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿ | 1) ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿರವರು ತಮ್ಮ ಕಾರ್ಯಪಟ್ಟಿಯಲ್ಲಿ ನಿಯಂತ್ರಣಾಧಿಕಾರಿರವರಿಂದ ತಪ್ಪು ವರದಿಯನ್ನು ಸ್ವೀಕರಿಸಬೇಕು.<br>2) ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿರವರು ಗುರುತಿಸಿರುವ ತಪ್ಪುಗಳಿಗಾಗಿ ತಿದ್ದುಪಡಿ ಕೋರಿಕೆಯನ್ನು ಮಂಡಿಸಿ, ಸರಿಪಡಿಸಲು ಮುಖ್ಯ ಲೆಕ್ಕಿಗರಿಗೆ ಮುಂದಕ್ಕೆ ಕಳುಹಿಸಬೇಕು. |

(ಅನಿಲ್ ಕುಮಾರ್ ಝಾ)

ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆ ಮತ್ತು ಸಂ)

ಆರ್ಥಿಕ ಇಲಾಖೆ.